## ಗಾಂಧಿನಗರ ಪೋಸ್ಟ್



# ಉಪ್ಪಿ ಕಲ್ಪನಾ ವಿಲಾಸ

ಉಪೇಂದ್ರ ಅವರು ನಾಯಕರಾಗಿ ನಟಿಸಿದ್ದ 'ಕಲ್ಪನಾ' ಸಿನಿಮಾ ದೊಡ್ಡ ಗೆಲುವು ಸಾಧಿಸಿತ್ತು. ಈ ಗೆಲುವನ್ನು ಪುನರಾವರ್ತನೆಗೊಳಿಸುವ ಹುಮ್ಮಸ್ಸಿನಲ್ಲಿ 'ಕಲ್ಪನಾ–2' ತೆರೆ ಕಾಣುತ್ತಿದೆ. ಕನ್ನಡ ಚಿತ್ರರಂಗದಲ್ಲಿ ದೆವ್ವಗಳ ಅಬ್ಬರ ಜೋರಾಗಿರುವ ಸಂದರ್ಭದಲ್ಲಿ 'ಕಲ್ಪನಾ 2' ಗೆಲ್ಲುವ ವಿಶ್ವಾಸ ಚಿತ್ರತಂಡದ್ದು. 'ಕಳ್ಳಪೊಲೀಸ್' ಸಿನಿಮಾದ ರಾಜೇಂದ್ರ ಈ ಚಿತ್ರದ ನಿರ್ಮಾಪಕರು.

ರಾಘವ ಲಾರೆನ್ಸ್‌ರ 'ಕಾಂಚನಾ 2' ತಮಿಳು ಚಿತ್ರದ ಕನ್ನಡ ಅವತರಣಿಕೆ ಈ ಕಲ್ಪನಾ. ತಮಿಳು ಮತ್ತು ತೆಲುಗಿನಲ್ಲಿ ಜನಪ್ರಿಯಗೊಂಡಿರುವ ಈ ಸಿನಿಮಾ ಕನ್ನಡದಲ್ಲೂ ಗೆಲುವು ಸಾಧಿಸುವ ವಿಶ್ವಾಸ ಚಿತ್ರತಂಡದ್ದು. ಮೂಲ ಚಿತ್ರಕ್ಕಿಂತಲೂ ಹೆಚ್ಚು ಅದ್ದೂರಿಯಾಗಿ ಕನ್ನಡ ಸಿನಿಮಾ ರೂಪಿಸಿದ್ದೇವೆ ಎನ್ನುವ ನಿರ್ದೇಶಕ ಆರ್. ಅನಂತರಾಜು ಅವರಿಗೆ ಸಿನಿಮಾದ ಗೆಲುವಿನ ಬಗ್ಗೆ ಅಪಾರ ನಿರೀಕ್ಷೆಗಳಿವೆ. 'ಇದೊಂದು ಫ್ಯಾಮಿಲಿ ಎಂಟರ್‌ಟೈನರ್. ಜನ ಕುಟುಂಬ ಸಮೇತವಾಗಿ ನೋಡಬಹುದಾದ ಸಿನಿಮಾ' ಎಂದು ತಮ್ಮ ಚಿತ್ರವನ್ನು ನಿರ್ದೇಶಕರು ಬಣ್ಣಿಸುತ್ತಾರೆ.

ಉಪೇಂದ್ರ ಅವರೊಂದಿಗೆ ಪ್ರಿಯಾಮಣಿ ಹಾಗೂ ಆವಂತಿಕಾ ಶೆಟ್ಟಿ ನಟಿಸಿರುವುದು ಚಿತ್ರದ ವಿಶೇಷಗಳಲ್ಲೊಂದು. ಎಂ.ಆರ್. ಸೀನು ಛಾಯಾಗ್ರಹಣ ಹಾಗೂ ಅರ್ಜುನ್ ಜನ್ಯ ಸಂಗೀತ ಚಿತ್ರಕ್ಕಿದೆ. ಮೂಲ ಚಿತ್ರದ ಟ್ಯೂನ್‌ಗಳನ್ನು ಬಳಸಿಕೊಳ್ಳಲು ಅವಕಾಶವಿದ್ದರೂ ಅರ್ಜುನ್ ಹೊಸ ಟ್ಯೂನ್‌ಗಳನ್ನು ಸಂಯೋಜಿಸಿದ್ದಾರೆ. ಪುನೀತ್ ರಾಜಕುಮಾರ್ ಹಾಗೂ ಉಪೇಂದ್ರ ಅವರು ಗೀತೆಗಳನ್ನು ಹಾಡಿರುವುದು ಕೂಡ ಸಿನಿಮಾದ ವಿಶೇಷಗಳ ಪಟ್ಟಿಯಲ್ಲಿದೆ.

ಅಂಕಿತಾ ಶೆಟ್ಟಿ, ಶೋಭರಾಜ್, ರಮೇಶ್ ಭಟ್, ತುಳಸಿ ಶಿವಮಣಿ, ಚಿತ್ರಾ ಶೆಣೈ, ವಿನಯಾ ಪ್ರಸಾದ್ ಹಾಗೂ ಕುರಿ ಪ್ರತಾಪ್ ತಾರಾಗಣದಲ್ಲಿರುವ ಪ್ರಮುಖರು.



# ಅರಳಿದ ಮನಸುಗಳು

'ಬ್ಯೂಟಿಫುಲ್ ಮನಸುಗಳು' ಜಯತೀರ್ಥ ನಿರ್ದೇಶನದ ಸಿನಿಮಾ. ಇತ್ತೀಚೆಗಷ್ಟೇ ಸಿನಿಮಾದ ಚಿತ್ರೀಕರಣ ಮುಗಿದಿದ್ದು, ಅಂತಿಮ ಹಂತದ ತಾಂತ್ರಿಕ ಕೆಲಸಗಳು ನಡೆಯುತ್ತಿವೆ.

'ಒಲವೇ ಮಂದಾರ', 'ಟೋನಿ'ಗಳಂಥ ಪ್ರಯೋಗಶೀಲ ಸಿನಿಮಾಗಳನ್ನು ನಿರ್ದೇಶಿಸಿದ್ದ ಜಯತೀರ್ಥ, 'ಬುಲೆಟ್ ಬಸ್ಯಾ' ಮೂಲಕ ನಿರಾಶೆ ಹುಟ್ಟಿಸಿದ್ದರು. ಗಲ್ಲಾಪೆಟ್ಟಿಗೆಯಲ್ಲಿ ಗೆದ್ದರೂ ತಮ್ಮದಲ್ಲದ ಶೈಲಿಯ ಸಿನಿಮಾ ಮಾಡಿ ಜಯತೀರ್ಥ ಬಸವಳಿದಂತಿದ್ದರು. ಈಗ 'ಬ್ಯೂಟಿಫುಲ್ ಮನಸುಗಳು' ಮೂಲಕ ಅವರು ಮರಳಿ ಹಳಿಗೆ ಬಂದಂತಿದೆ. ಹೆಸರಿಗೆ ತಕ್ಕಂತೆ 'ಇದು ಸುಂದರವಾದ ಮನಸುಗಳ ಕಥೆಯ ಸಿನಿಮಾ' ಎನ್ನುತ್ತಾರೆ. ಹೊಸ ರೀತಿಯ ಪ್ರಯತ್ನಗಳು ಗೆಲ್ಲುತ್ತಿರುವ ಸಂದರ್ಭದಲ್ಲಿ 'ಮನಸ್ಸುಗಳನ್ನು ಅರಳಿಸುವ' ತಮ್ಮ ಸಿನಿಮಾ ಗೆಲ್ಲಲಿದೆ ಎನ್ನುವ ವಿಶ್ವಾಸ ಅವರದು.

ಬಿ.ಜೆ. ಭರತ್ ಸಂಗೀತ ಸಂಯೋಜನೆ ಹಾಗೂ ಕಿರಣ್ ಹಂಪಾಪುರ ಅವರ ಛಾಯಾಗ್ರಹಣ 'ಬ್ಯೂಟಿಫುಲ್ ಮನಸುಗಳು' ಚಿತ್ರಕ್ಕಿದೆ. ನೀನಾಸಂ ಸತೀಶ್ ಶ್ರುತಿ ಹರಿಹರನ್ ಮುಖ್ಯಪಾತ್ರಗಳಲ್ಲಿ ನಟಿಸಿದ್ದಾರೆ. 'ಲೂಸಿಯಾ' ಚಿತ್ರದ ನಂತರ ಈ ಜೋಡಿಯನ್ನು ಜಯತೀರ್ಥ ಮತ್ತೆ ಒಗ್ಗೂಡಿಸಿರುವುದು ವಿಶೇಷ. ಅಚ್ಯುತ ಕುಮಾರ್, ತಬಲ ನಾಣಿ ಹಾಗೂ ಪ್ರಶಾಂತ್ ಸಿದ್ದಿ ತಾರಾಗಣದಲ್ಲಿ ಇರುವ ಪ್ರಮುಖರು. 'ಸ್ಕಂದ' ಆಡಿಯೊದ ಪ್ರಸನ್ನ ಚಿತ್ರದ ನಿರ್ಮಾಪಕರು.